ಹಬ್ಬಾ ಮಾಡಿದರೆ?...' ಕೋಣೆಯ ಬಾಗಿಲಲ್ಲಿ ಕೂತ ದೇವೀರಿ ಅಂದಳು. 'ಯಾಕೆ ಹಬ್ಬಾ ಮಾಡ್ತಾ ಇಲ್ಲ?' ಅಂದ ರಾಜಣ್ಣ. 'ಊರ ಬಾವೀಲಿ ತಳ ಕೆರೆದರೂ ನೀರಿಲ್ಲ... ಬರೋ ಹಾದೀಲಿ ಗದ್ದೇನ ನೋಡುದಾ...' ಎಂದು ದೇವೀರಿ ಸತ್ತ ದನಿಯಲ್ಲಿ ಶುರುಮಾಡಿದಳು. ಹತ್ತು ವರ್ಷದ ಹುಡುಗಿ ದೇವೀರಿ ಮುದುಕಿಯಂತೆ ಭಾರವಾದ ದನಿಯಲ್ಲಿ ವರದಿ ಒಪ್ಪಿಸುತ್ತಿದ್ದಳು. ಅಷ್ಟರಲ್ಲಿ 'ರಾಜಣ್ಣ ಬಂದಿರುವಂಗದೆ' ಎಂಬ ಕೀರಲು ದನಿಯೊಂದು ತೂರಿ ಬಂತು. ದನಿಯ ಬೆನ್ನಿಗೇ ದನಿಯ ವಾರಸುದಾರ್ತಿಯೂ ಕಾಣಿಸಿಕೊಂಡಳು. ದೊಡ್ಡವ್ವನ ಹಿರಿಹುಡುಗಿ ಗೌರಕ್ಕ. 'ಇವಾಗ ಬಂದೆ' ಎನ್ನುತ್ತಾ ರಾಜಣ್ಣ ಕೊರಳೆತ್ತಿದ: ಸೊಂಟಕ್ಕೆ ಕೈಯೂರಿಕೊಂಡು ನಿಂತ ಗೌರಕ್ಕ ದೊಡ್ಡವ್ವನೇ ಗೌರಕ್ಕನ ಮಗಳಿರಬೇಕು ಎಂದು ಅನುಮಾನ ಬರುವಷ್ಟು ಹಣ್ಣಾದವಳಂತೆ ಕಂಡಳು. ದುಂಡಗೆ ಮೈತುಂಬಿಕೊಂಡಿದ್ದ ಗೌರಕ್ಕ ಸೀದುಹೋಗಿದ್ದಳು.

ಈಗ್ಗೆ ಹತ್ತು ಹನ್ನೆರಡು ವರ್ಷದ ಹಿಂದಿನ ಶ್ರಾವಣದಲ್ಲಿರಬೇಕು. ಕಡೆಗೂ ಗೌರಕ್ಕ ಹಸೆಮಣೆಯ ಮೇಲೆ ಕುಂತಿದ್ದಳು. ಇಪ್ಪತ್ತನಾಲಕ್ಕು ತುಂಬಿ ಕೊನೆಗೂ ಕಂಕಣಬಲವೊಂದು ಕೂಡಿಬಂದಾಗ 'ಅವರು ಒಪ್ಕಂಡವರಂತೆ, ರಾಜಣ್ಣ' ಎಂದು ನಾಚಿಕೆಯಲ್ಲಿ ಉಸುರಿದ್ದಳು. ನಾಕಾರು ವರ್ಷದ ಕಾವಳವೆಲ್ಲ ಒಂದೇಟಿಗೆ ಕರಗಿದವಳಂತೆ ಹೊಸ ಗೌರಕ್ಕನಾಗಿ ಫಳಗುಟ್ಟಿದೋಳನ್ನು ರಾಜಣ್ಣ ಬೆರಗಲ್ಲಿ ನೋಡಿದ್ದ. ಇದೇ ಗೌರಕ್ಕ ಮೊದಮೊದಲೆಲ್ಲ ಎಷ್ಟೊಂದು ರಂಪರಾಮಾಯಣ ಮಾಡಿ ಕೊಂಡಿದ್ದಳು. ಮಾತು ಮಾತಿಗೂ ಸಿಡುಕುತ್ತಾ ಇದ್ದಳು. ಇಂಥ ಗೌರಕ್ಕ ಮಾತಿಗೆ ಮಾತು ತಗುಲಿ ಜಗಳಾಡಿ ಬಿಕ್ಕಿದರೆ ಇದನ್ನು ಅವಳ ಲಗ್ನದ ಚಿಂತೆಯೆಂದೇ ತಿಳಿದು ತಿವಿಯುವ ದೊಡ್ಡವ್ವ ಬೇರೆ ಜೊತೆಗೆ. 'ನಿನ ಲಗ್ನಾ ಮಾಡಬಾರದೂಂತಲೇನೂ ನಾವು ಮಾಡಿಕೆಂಡಿದೀವ? ನಾವೂನೂ ಕಣ್ಣಿಗೆ ಯಣ್ಣೆ ಬಿಟುಕೊಂಡು ವುಡುಕುತಾ ಇಲ್ಲವ, ನೀನ್ಯಾಕೆ ಸೊಟರುಗುಟ್ಟುವುದು' ಮುಂತಾಗಿ ದೊಡ್ಡವ್ವ ತಿವಿದಂತೆ ಇವಳ ಅಳುಬುರುಕು ರಾಗ ಚಾವಣಿ ಸೀಳತೊಡಗುತ್ತಿತ್ತು.

ಅಂಥ ಹೊತ್ತೊಳಗೆಲ್ಲ ದೊಡ್ಡವ್ವ ತಲೆ ಕೆದರಿಕೊಂಡು ತೊಲೆಕಂಬ ಮುಟ್ಟುವಂತೆ ಬೆಳೆದು ನಿಂತ ಗಂಡುಮಕ್ಕಳ ಕೊರಳಪಟ್ಟಿ ಹಿಡಕೊಂಡು 'ಬೋಳೀಮಕ್ಕಳಾ ಬೀಜ ಹೊತ್ತು ಯಾಕೆ ಉಟ್ಟಿದೀರೋ ತಂಗೀ ಅಂಬೋಳಿಗೊಂದು ಗಂಡು ಉಡುಕೋ ಗಂಡಸುತನವಿಲ್ಲದಿದ್ದರೇ...' ಎಂದು ಊರಿಗೂರೇ ನೆರೆಯುವಂತೆ ಅಬ್ಬರಿಸುತ್ತಿದ್ದರೆ ಇಬ್ಬರೂ ಗಂಡುಮಕ್ಕಳು ನೆಲಕ್ಕೆ ಕುಸಿದು ಕಣ್ಣಿಗೆ ಕಾಣದಂತೆ ಮಾಯವಾಗಿಬಿಡುತ್ತಿದ್ದರು. ಇಂಥ ಯಾವುದೋ ಒಂದು ಜಗಳದಲ್ಲಿ ಗೌರಕ್ಕ ಹಲ್ಲು ಕಚ್ಚಿಕೊಂಡು ದೊಡ್ಡವ್ವನ ಕುತ್ತಿಗೆ ಹಿಸುಕಲು ಹೋಗಿ ತಲೆಕೂದಲು ತರಿದು, ಮೊಲೆ ಮುಖ ಬೆನ್ನೆನ್ನದೆ ಎಲ್ಲೆಂದರಲ್ಲಿ ಹಲ್ಲಲ್ಲಿ ಸಿಗಿದು ರಂಪವೆಬ್ಬಿಸಿ 'ಮಾದರ್‌ಚೋದ್ ರಂಡೇ ಊರ ತುಂಬ ಬಾಯಿ ಮಾಡುತ್ತೀಯ' ಎಂದು ದೊಡ್ಡವ್ವನನ್ನು ಒಂದೇ ಏಟಿಗೆ ಎತ್ತಿ ಕುಕ್ಕಿಬಿಟ್ಟಿದ್ದಳು.

ರಾಜಣ್ಣನೇನಾದರೂ ಅಲ್ಲಿ ವಕ್ಕರಿಸದೇ ಹೋಗಿದ್ದರೆ ಅವತ್ತು ದೊಡ್ಡವ್ವನಿಗೆ ಬಿದಿರುಗಳ, ಬೊಂಬು ಕೂಡಿಹಾಕಬೇಕಾಗುತ್ತಿತ್ತು. ಭೇತಾಳದಂತೆ ವರಲತೊಡಗಿದ್ದ ದೊಡ್ಡವ್ವನ 'ಅಯ್ಯಯ್ಯೋ, ಸಿವನೇ! ಕೊಂದಳಲ್ಲೋ ಈ ಮುಂಡೇ' ಎಂಬ ರಾಗದ ನಡುವೆ ತಲೆ ತರಿಯುತ್ತ ಭುಸುಗುಡುತ್ತಿದ್ದವಳನ್ನು ರಾಜಣ್ಣ ಹಿಡಕೊಂಡು 'ಗೌರಕ್ಕ ಏನು ಬಂದೈತಮ್ಮೀ ನಿನಗೆ' ಎಂದು ಎಳಕೊಂಡು ಕೋಣೆಗೆ ನಡೆದಾಗ, ಅವನ ಎದೆಗೆ ಗೌರಕ್ಕನ ಮೊಲೆ ತಗುಲಿ ಗೌರಕ್ಕ ರಾಜಣ್ಣನನ್ನು ಬಿಡದವಳಂತೆ ಅವುಚಿಕೊಂಡುಬಿಟ್ಟಿದ್ದಳು. ಈ ಹಬೆಯೊಳಗೆ ಏನೂ ತೋರದ ರಾಜಣ್ಣ ಹಗುರವಾಗಿ ತೋಳು ಬಿಡಿಸಿಕೊಂಡು ಅವಳನ್ನು ಕುಕ್ಕರು ಬಡಿಸಿದಾಗ ಪದವೊಂದೂ ಹೊರಡದೆ ಗೌರಕ್ಕ ಬಿಕ್ಕಳಿಸಿದ್ದರೆ, ದೊಡ್ಡವ್ವ 'ಕುಲಾಕರ್ಮಿ ಉಟ್ಟಿಬಿಟ್ಟಳಲ್ಲೊ... ನನ ಗ್ವಾಮಾಳೆ ಹಿಸುಕಿ